

بِسْمِ اللَّهِ الرَّحْمَنِ الرَّحِيم

# ಸತ್ಯ ಮತ್ತು ನ್ಯಾಯಪಾಲನೆಯ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **10–11–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَا أَيُّهَا الَّذِينَ آمَنُوا كُونُوا قَوَّامِينَ بِالْقِسْطِ شُهَدَاءَ لِلَّهِ وَلَوْ عَلَىٰ أَنفُسِكُمْ أَوِ الْوَالِدَيْنِ وَالْأَقْرَبِينَ ۚ إِن يَكُنْ غَنِيًّا أَوْ فَقِيرًا فَاللَّهُ أَوْلَىٰ بِهِمَا ۖ فَلَا تَتَّبِعُوا الْهَوَىٰ أَن تَعْدِلُوا ۚ وَإِن تَلْوُوا أَوْ تُعْرِضُوا فَإِنَّ اللَّهَ كَانَ بِمَا تَعْمَلُونَ خَبِيرًا -

يَا أَيُّهَا الَّذِينَ آمَنُوا كُونُوا قَوَّامِينَ لِلَّهِ شُهَدَاءَ بِالْقِسْطِ ۖ وَلَا يَجْرِمَنَّكُمْ شَنَآنُ قَوْمٍ عَلَىٰ أَلَّا تَعْدِلُوا ۚ اعْدِلُوا هُوَ أَقْرَبُ لِلتَّقْوَىٰ ۖ وَاتَّقُوا اللَّهَ ۚ إِنَّ اللَّهَ خَبِيرٌ بِمَا تَعْمَلُونَ -

وَمِمَّنْ خَلَقْنَا أُمَّةٌ يَهْدُونَ بِالْحَقِّ وَبِهِ يَعْدِلُونَ -

**ಯಾ ಅಯ್ಯುಹಲ್ಲದೀನ ಆಮನೂ ಕೂನೂ ಖವ್ವಾಮೀನ ಬಿಲ್ ಖಿಸ್ತಿ ಶುಹದಾಅ ಲಿಲ್ಲಾಹಿ ವಲವ್ ಅಲಾ ಅನ್‌ಫುಸಿಕುಮ್ ಅವಿಲ್ ವಾಲಿದೈನಿ ವಲ್ ಅಖ್‌ರಬೀನ ಇನ್ ಯಕುನ್ ಗನಿಯ್ಯನ್ ಅವ್ ಫಖೀರನ್ ಫಲ್ಲಾಹು ಅವ್‌ಲಾ ಬಿಹಿಮಾ ಫಲಾತತ್ತಬಿಉಲ್ ಹವಾ ಅನ್ ತಅ್‌ದಿಲೂ ವ ಇನ್ ತಲ್‌ವೂ ಅವ್ ತಅ್‌ರಿಝೂ ಫ ಇನ್ನಲ್ಲಾಹ ಕಾನ ಬಿಮಾ ತಅ್‌ಮಲೂನ ಖಬೀರ. (4:136).**
**ಯಾ ಅಯ್ಯುಹಲ್ಲದೀನ ಆಮನೂ ಕೂನೂ ಖವ್ವಾಮೀನ ಲಿಲ್ಲಾಹಿ ಶುಹದಾಅ ಬಿಲ್ ಖಿಸ್ತಿ, ವಲಾ ಯಜ್‌ರಿಮನ್ನಕುಮ್ ಶನಆನು ಖೌಮಿನ್ ಅಲಾ ಅಲ್ಲಾತಅ್‌ದಿಲೂ, ಇಅ್‌ದಿಲೂ ಹೂವ ಅಖ್‌ರಬು ಲಿತ್ತಖ್ವಾ, ವತ್ತಖುಲ್ಲಾಹ ಇನ್ನಲ್ಲಾಹ ಖಬೀರುನ್ ಬಿಮಾ ತಅ್‌ಮಲೂನ್. (5:9).**

**ವ ಮಿಮ್ಮನ್ ಖಲಖ್‌ನಾ ಉಮ್ಮತುನ್ ಯಹ್‌ದೂನ ಬಿಲ್ ಹಖ್ಖಿ ವ ಬಿಹೀ ಯಅ್‌ದಿಲೂನ್. (7:182).**

ಯಾವ ರೀತಿಯ ಮತ್ತು ಯಾವ ಮಟ್ಟದ ನ್ಯಾಯಪಾಲನೆ ಹಾಗೂ ನ್ಯಾಯಸ್ಥಾಪನೆ ಮಾಡಬೇಕೆಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಮರಿಗೆ ಮಾರ್ಗದರ್ಶನ ನೀಡಿರುವನೋ ಅಂತಹ ಮಟ್ಟದ ಪ್ರಸ್ತಾಪ ಬೇರೆ ಯಾವುದೇ ಧಾರ್ಮಿಕ ಗ್ರಂಥದಲ್ಲಿ ಇರುವುದಿಲ್ಲ. ಆದರೆ ದೌರ್ಭಾಗ್ಯವಶಾತ್ ಈಗ ಮುಸ್ಲಿಮರಲ್ಲಿ ಬಹಳ ದೊಡ್ಡ ಭಾಗ, ಅವರ ನಾಯಕರಲ್ಲಿ ಮತ್ತು ಮತಪಂಡಿತರಲ್ಲಿ ಸಹ ಹೇಗೆ ಇದ್ದಾರೆ ಎಂದರೆ ಅವರು ನ್ಯಾಯಪಾಲನೆ ಮತ್ತು ನ್ಯಾಯಸ್ಥಾಪನೆಯ ಆವಶ್ಯಕತೆಗಳನ್ನು ಈಡೇರಿಸುವುದಿಲ್ಲ. ಅದೇ ರೀತಿ ಮನೆಗಳಲ್ಲಿ, ಸಮಾಜದಲ್ಲಿ, ಮುಸ್ಲಿಮರು ಪರಸ್ಪರ ಸಹ ಅವರ ದೈನಂದಿನ ವ್ಯವಹಾರದಲ್ಲಿ ನ್ಯಾಯಪಾಲನೆ ಮತ್ತು ನ್ಯಾಯಸ್ಥಾಪನೆ ಬಗ್ಗೆ ಅಲ್ಲಾಹನು ನಿಶ್ಚಯಿಸಿದ ಮಟ್ಟವನ್ನು ಪಾಲಿಸುವುದಾಗಿ ಕಾಣುವುದಿಲ್ಲ. ಒಬ್ಬ ಸತ್ಯವಿಶ್ವಾಸಿಯಿಂದ ಪ್ರತೀಕ್ಷಿಸಬೇಕಾದ ಮಟ್ಟದಲ್ಲಿ ಅವು ಕಾಣಲ್ಪಡುವುದಿಲ್ಲ. ಮನೆ ಜಗಳಗಳಿಗೆ ಸಂಬಂಧಿಸಿ ಪುರುಷರೂ ಕೆಲವು ಸಾರಿ ಮಹಿಳೆಯರೂ ತಪ್ಪು ತಪ್ಪಾಗಿ ಘಟನೆಗಳನ್ನು ಪ್ರಸ್ತಾಪಿಸಿ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳನ್ನು ದಾಖಲಿಸುತ್ತಿದ್ದಾರೆ. ಸುಳ್ಳು ಸಾಕ್ಷ್ಯಗಳನ್ನು ನೀಡಲಾಗುತ್ತದೆ. ಅನ್ಯಾಯದಿಂದ ಹಕ್ಕು ಪಡೆಯಲು ಅಥವಾ ಯಾರದಾದರೂ ಹಕ್ಕುಗಳನ್ನು ಧ್ವಂಸಗೊಳಿಸಲು ಸುಳ್ಳು ಮತ್ತು ತಪ್ಪಾದ ಹೇಳಿಕೆಗಳನ್ನು ಬಳಸಲಾಗುತ್ತಿದೆ. ಒಟ್ಟಾರೆ ಹೇಳುವುದಾದರೆ ಬಹಳ ಸಂಖ್ಯೆಯ ಜನರು ಹೇಗಿದ್ದಾರೆಂದರೆ ಅವರು ಸತ್ಯವನ್ನು ಬಿಗಿಹಿಡಿಯುವುದಿಲ್ಲ. ಸುಳ್ಳು ಹೇಳುತ್ತಾರೆ. ಮತ್ತು ನ್ಯಾಯಾಲಯಗಳು ಸಹ ತಪ್ಪು ಮಾಡುವಂತೆ, ಮೋಸ ಹೋಗುವಂತೆ ಮಾಡುತ್ತಾರೆ. ಕೆಲವು ಸ್ಥಳಗಳಲ್ಲಿ ನ್ಯಾಯತೀರ್ಪು ನೀಡುವವರು ಸಹ ತಮ್ಮ ಸ್ವಾರ್ಥ ಲಾಭಕ್ಕೋಸ್ಕರ ತಪ್ಪಾದ ತೀರ್ಪು ನೀಡುತ್ತಾರೆ. ಈ ರೀತಿ ಸಂಪೂರ್ಣ ನ್ಯಾಯವ್ಯವಸ್ಥೆಯೇ ಬಿಗಡಾಯಿಸಿದೆ. ಈ ಅನ್ಯಾಯಗಳ ಕಾರಣದಿಂದ ಸಮಾಜದಲ್ಲಿ ಕೆಡುಕುಗಳು ಹಬ್ಬುತ್ತಾ ಇವೆ. ರಾಷ್ಟ್ರೀಯ ನೆಲೆಯಲ್ಲಿ ಅಧಿಕಾರಾರೂಢರು ನ್ಯಾಯ ಪಾಲನೆಯ ಆವಶ್ಯಕತೆಗಳನ್ನು ಈಡೇರಿಸುತ್ತಾ ಇಲ್ಲ. ಅವರು ತಮ್ಮ ದೇಶದ ಜನರಿಗೆ ನ್ಯಾಯವನ್ನು ಒದಗಿಸಿಕೊಡಬೇಕಾದ ಆವಶ್ಯಕತೆಯನ್ನು ಈಡೇರಿಸುವುದೂ ಇಲ್ಲ. ದೇಶಗಳು ಪರಸ್ಪರ ಸಂಬಂಧಗಳಿಗೆ ಸಂಬಂಧಿಸಿ ನ್ಯಾಯಪಾಲನೆಯನ್ನು ಮಾಡುತ್ತಾ ಇಲ್ಲ. ಮತಪಂಡಿತರು ಧರ್ಮವನ್ನು ತಮ್ಮ ವೈಯಕ್ತಿಕ ಲಾಭಗಳಿಸುವ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ನಾವು **ಖೈರುಲ್ ಉಮ್ಮತ್** (ಅತ್ಯುತ್ತಮ ಸಮುದಾಯ) ಎಂದೂ ಇಸ್ಲಾಮ್ ಲೌಕಿಕ ಸಮಸ್ಯೆಗಳಿಗೆ ಅತ್ಯುತ್ತಮ ಪರಿಹಾರ ಸೂಚಿಸುತ್ತದೆ ಎಂದೂ ಮುಸ್ಲಿಮರು ವಾದಿಸುತ್ತಾರೆ. ಮುಸ್ಲಿಮರು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರಾಗುವುದಾದರೆ ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅನುಷ್ಠಾನಕ್ಕೆ ತರುವವರಾದರೆ ಅವರು ಖಂಡಿತವಾಗಿಯೂ ಅತ್ಯುತ್ತಮ ಸಮುದಾಯವಾಗಬಲ್ಲರು. ಖಂಡಿತವಾಗಿಯೂ ಪವಿತ್ರ ಖುರ್‌ಆನ್ ಲೌಕಿಕ ಸಮಸ್ಯೆಗಳಿಗೆ ಪರಿಹಾರ ಮಾರ್ಗ ಸೂಚಿಸುತ್ತದೆ. ಆದರೆ ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಸತ್ಯವನ್ನೂ ನ್ಯಾಯವನ್ನೂ ಸ್ಥಾಪಿಸುವುದು ಅತ್ಯಾವಶ್ಯಕ ಶರತ್ತಾಗಿದೆ.

ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನಗಳು ಮೂರು ವಿವಿಧ ಸೂರತ್‌ಗಳಿಗೆ ಸೇರಿವೆ. ಅನ್ನಿಸಾಅ್, ಅಲ್‌ಮಾಯಿದ ಮತ್ತು ಅಲ್‌ಅಅ್‌ರಾಫ್. ನಾನು ಪಠಿಸಿದ ಪ್ರಥಮ ವಚನ ಅನ್ನಿಸಾಅ್ ಅಧ್ಯಾಯದ್ದಾಗಿದೆ. ಅದರ ಭಾಷಾಂತರ ಹೀಗಿದೆ: **ಓ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ**

**ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವರು ಧನಿಕರಾಗಿರಲಿ ಯಾ ದರಿದ್ರರಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ. ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗಪಡಿಸದೆ) ನುಣುಚಿಕೊಂಡರೆ (ತಿಳಿದು ಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ. (4:136).**

ಇದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನ್ಯಾಯಪಾಲನೆ ಮಾಡುವ ಬಗ್ಗೆ ನೀಡಿದ ಆಜ್ಞೆಯಾಗಿದೆ. ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿಯೂ ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳಲ್ಲಿಯೂ ಸಮಾಜಕ್ಕೆ ಸಂಬಂಧಿಸಿದ ವಿಷಯಗಳಲ್ಲೂ ಯಾವುದೇ ಪರಿಸ್ಥಿತಿಯಲ್ಲಿಯೂ ಯಾವಾಗಲೂ ನ್ಯಾಯಪೂರ್ಣವಾಗಿ ವರ್ತಿಸುವುದು ಆವಶ್ಯಕವಾಗಿದೆ. ಅಲ್ಲಾಹನಿಗೋಸ್ಕರ ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದಕ್ಕೋಸ್ಕರ ಸಾಕ್ಷಿಯನ್ನು ಹೇಳಬೇಕು ಎಂದು ಸತ್ಯವಿಶ್ವಾಸಿಗಳಿಗೆ ಆಜ್ಞೆ ನೀಡಲಾಗಿದೆ. ಇದು ಸಾಧ್ಯವಾಗುವುದು ಅಲ್ಲಾಹನ ಬಗ್ಗೆ ಪರಿಪೂರ್ಣ ವಿಶ್ವಾಸವಿರುವಾಗ ಮಾತ್ರವಾಗಿದೆ. ವಿಶ್ವಾಸದ ಮಟ್ಟ ಅತ್ಯಂತ ಉನ್ನತವಾಗಿರಬೇಕು ಮತ್ತು ಬಲಿಷ್ಠವಾಗಿರಬೇಕು. ಒಬ್ಬನು ತನ್ನ ವಿರುದ್ಧ, ತನ್ನ ಪತ್ನಿ ಮತ್ತು ಮಕ್ಕಳ ವಿರುದ್ಧ, ತನ್ನ ತಂದೆ ತಾಯಂದಿರ ವಿರುದ್ಧ ಸಹ ಆವಶ್ಯಕ ಸಂದರ್ಭಗಳಲ್ಲಿ ಸತ್ಯವಾದ ಸಾಕ್ಷ್ಯ ನೀಡಲು ಸಿದ್ಧನಾಗುವಾಗ, ತನ್ನ ನಿಕಟ ಬಂಧುಗಳ ವಿರುದ್ಧ ಸತ್ಯವಾದ ಸಾಕ್ಷ್ಯವನ್ನು ನೀಡಲು ಸಿದ್ಧನಾಗುವಾಗ ಮಾತ್ರ ಒಬ್ಬನ ವಿಶ್ವಾಸದ ಬಲಿಷ್ಠತೆ ಎಷ್ಟೆಂದು ಸಾಬೀತಾಗುತ್ತದೆ. ಆಶಾಭಿಲಾಷೆಗಳನ್ನು ಹಿಂಬಾಲಿಸುವುದು ನ್ಯಾಯಪಾಲನೆಯಿಂದ ದೂರ ಸರಿಸುತ್ತದೆ. ನೀವು ನಿಮ್ಮ ಆಶಾಭಿಲಾಷೆಗಳನ್ನು ಹಿಂಬಾಲಿಸುವಿರಾದರೆ ನೀವು ನ್ಯಾಯಪಾಲನೆಯಿಂದ ದೂರ ಸರಿಯುವಿರಿ. ಅಲ್ಲಾಹನು ಇಚ್ಛಿಸುವ ರೀತಿಯ ನ್ಯಾಯ ಪಾಲನೆಯ ಮಟ್ಟ ಇಂದಿನ ಸಮಾಜದಲ್ಲಿ ಇಲ್ಲದಿರುವುದರಿಂದಲೇ ಇಂದಿನ ಕಾಲದಲ್ಲಿ ಸಮಾಜದಲ್ಲಿ ಬಹಳ ಸಮಸ್ಯೆಗಳು ತಲೆದೋರುತ್ತಿವೆ. ವಿಷಯಗಳನ್ನು ತಪ್ಪಾದ ರೀತಿಯಲ್ಲಿ ಪ್ರಸ್ತಾಪಿಸುವುದು ಇಂದಿನ ಕಾಲದ ಸಾಮಾನ್ಯ ರೀತಿಯಾಗಿದೆ.

ದುಃಖಕರವಾದ ವಿಷಯವೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ನಮ್ಮವರಲ್ಲಿ ಸಹ ಕೆಲವರು, ಕೆಲವು ಸಂದರ್ಭಗಳಲ್ಲಿ ಲೌಕಿಕ ಲಾಭೇಚ್ಛೆಯಿಂದ ಮತ್ತು ಪರಿಸರದಿಂದ ಪ್ರಭಾವಿತರಾಗಿ ಎಂತಹ ಸಾಕ್ಷ್ಯ ನೀಡುತ್ತಾರೆಂದರೆ ಆ ಸಾಕ್ಷ್ಯ ವಾಸ್ತವಿಕಾಂಶಗಳಿಗೆ ವಿರುದ್ಧವಾಗಿರುತ್ತವೆ. ಅಲ್ಲಾಹನು ಹೇಳುವುದೇನೆಂದರೆ ನಿಮಗೆ ವೈಯಕ್ತಿಕವಾಗಿ ನಷ್ಟ ಸಂಭವಿಸುವುದಾದರೂ ನಿಮ್ಮ ತಂದೆ ತಾಯಂದಿರಿಗೆ ನಷ್ಟವಾಗುವುದಾದರೂ ನೀವು ತಪ್ಪಾದ ರೀತಿಯಲ್ಲಿ ಸಾಕ್ಷ್ಯ ಹೇಳಬಾರದು. ಸತ್ಯವನ್ನು ಮರೆಮಾಡಲು ಪ್ರಯತ್ನಿಸಲಾಗಿದೆ ಎಂಬ ಭಾವನೆ ಹುಟ್ಟುವಂತಹ ಸಾಕ್ಷ್ಯ ನುಡಿಯಬಾರದು. ಸತ್ಯ ಹೇಳುವುದನ್ನು ತಪ್ಪಿಸಲು ಪ್ರಯತ್ನ ಮಾಡಿರಬಾರದು ಎಂದಾಗಿದೆ. ನಾವು ದೈನಂದಿನ ಜೀವಿತದಲ್ಲಿ ಈಗ ಕಾಣುತ್ತಿದ್ದೇವೆ, ಪತಿ ಪತ್ನಿಯರ ಜಗಳಕ್ಕೆ ಸಂಬಂಧಿಸಿ ಖುಝಾದಲ್ಲಿ ಎಂತಹ ವ್ಯಾಜ್ಯಗಳು ಬರುತ್ತಿವೆ ಎಂದರೆ ಅಲ್ಲಿ ವಾಸ್ತವಿಕಾಂಶಗಳು ಪ್ರಸ್ತಾಪಿಸಲ್ಪಡುವುದಿಲ್ಲ. ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿ ಸಹ ವಾಸ್ತವಿಕಾಂಶಗಳನ್ನು ಮರೆಮಾಡಲಾಗುತ್ತಿದೆ. ಧಾರ್ಮಿಕ ಜ್ಞಾನವುಳ್ಳ ಕೆಲವರು, ಬಾಹ್ಯವಾಗಿ ಸೇವೆ ಸಲ್ಲಿಸುವುದರಲ್ಲಿ ಮುಂದಾಗಿರುವುದಾಗಿ ಕಾಣಿಸಿಕೊಳ್ಳುವವರು ಸಹ ಎಂತಹ ಕೆಲಸ ಮಾಡುತ್ತಾರೆಂದರೆ ಮನುಷ್ಯರು ಗಾಬರಿಯ ಮೇಲೆ ಗಾಬರಿಗೊಳ್ಳುತ್ತಿದ್ದಾರೆ ಮತ್ತು ಯೋಚಿಸುತ್ತಾರೆ, ಬಾಹ್ಯವಾಗಿ ಬಹಳ ದೊಡ್ಡ ವಿದ್ವಾಂಸರಾಗಿ ಕಾಣಿಸಿಕೊಳ್ಳುವ ಈ ಮನುಷ್ಯರು ಇಂತಹ ಮಾತುಗಳನ್ನು ಆಡಬಲ್ಲರೇ ಎಂದು.

ನಾವು ಯಾವ ಇಮಾಮರನ್ನು ನಂಬಿರುವೆವೋ ಅವರು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಅನುಷ್ಠಾನಕ್ಕೆ ತಂದು ಎಂತಹ ಉದಾಹರಣೆಗಳನ್ನು ಸ್ಥಾಪಿಸಿದ್ದಾರೆಂದರೆ ಅನ್ಯರನ್ನು ಸಹ ಅವು ತಬ್ಬಿಬ್ಬುಗೊಳಿಸುತ್ತವೆ. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಪಿತ ತನ್ನ ಜಮೀನಿನ ಕೃಷಿಕರ ವಿರುದ್ಧ ಹೂಡಿದ ಒಂದು ಮೊಕದ್ದಮೆಯಲ್ಲಿ ಸಾಕ್ಷಿಯಾಗಿದ್ದರು. ಅವರು ನ್ಯಾಯಪಾಲನೆಯ ಆವಶ್ಯಕತೆಗೆ ಅನುಸಾರವಾಗಿ ಸತ್ಯವಾದ ಸಾಕ್ಷ್ಯವನ್ನೇ ಹೇಳಿದರು. ಅದರಿಂದ ಕೃಷಿಕರಿಗೆ ಲಾಭವಾಯಿತು. ಅವರ ತಂದೆಗೆ ನಷ್ಟವುಂಟಾಯಿತು. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಯಾವ ಸತ್ಯಸಂಧನಾದ ಸೇವಕನನ್ನು ನಾವು ನಂಬಿರುವೆವೋ ಅವರ ಕಾರ್ಯರೂಪದ ಮಾದರಿಯನ್ನು ನಮ್ಮ ಮುಂದೆ ಇರಿಸಿ ನಾವು ನಮ್ಮ ಸಾಕ್ಷ್ಯಗಳಿಗೆ ಸಂಬಂಧಿಸಿ ಪರಿಶೋಧನೆ ನಡೆಸಬೇಕು.

ನಮ್ಮ ಸಂಕಲ್ಪ ಉತ್ತಮವಾಗಿದ್ದರೆ, ನಾವು ಅಲ್ಲಾಹನಿಗೋಸ್ಕರ ಸಾಕ್ಷ್ಯ ನೀಡುವವರಾಗಿ, ನ್ಯಾಯವನ್ನು ಬಲಿಷ್ಠವಾಗಿ ಹಿಡಿದುಕೊಂಡು, ನಮ್ಮ ಸಾಕ್ಷ್ಯಗಳನ್ನು ಸತ್ಯವೂ ನೇರವೂ ಆದ ಮಾತುಗಳಲ್ಲಿ ಹೇಳಿ ನಮ್ಮ ಸಾಕ್ಷ್ಯದ ಮಟ್ಟವನ್ನು ಉನ್ನತಗೊಳಿಸಿದರೆ ನಮ್ಮ ಪರಿಪಾಲಕನೂ ನಮಗೆ ಆಹಾರ ನೀಡುವವನೂ (ರಾಝಿಖ್) ಆಗಿರುವ ಅಲ್ಲಾಹನು ನಮಗೆ ಸಾಮಗ್ರಿಗಳನ್ನು ಒದಗಿಸುವನು ಮತ್ತು ನಮ್ಮ ಆಹಾರ ಪದಾರ್ಥಗಳಲ್ಲಿ ಅನುಗ್ರಹ ನೀಡುವನು. ಆದುದರಿಂದ ನಾವು ಪ್ರತಿ ಸಮಯದಲ್ಲಿಯೂ ನಮ್ಮನ್ನು ಪರಿಶೋಧಿಬೇಕು. ನಾವು ನ್ಯಾಯ ಪಾಲನೆಯ ಇಂತಹ ಮಟ್ಟವನ್ನು ಸ್ಥಾಪಿಸಲು ಪ್ರಯತ್ನ ಮಾಡುವುದಿಲ್ಲವಾದರೆ ನಮ್ಮ ಮನೆಗಳಲ್ಲಿಯೂ ಶಾಂತಿ ನೆಲೆಸದು. ನಮ್ಮ ಸಮಾಜದಲ್ಲಿಯೂ ಶಾಂತಿ ನೆಲೆಸದು.

ನಾನು ಪಠಿಸಿದ ಸೂರತುಲ್ ಮಾಯಿದ ಒಂಬತ್ತನೇ ವಚನದ ಅರ್ಥ ಹೀಗಿದೆ: **ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು,**

**ಅಲ್ಲಾಹನ ಮಾರ್ಗದಲ್ಲಿ ಸ್ಥಿರ ಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ. (5:9).**

ಕೆಲವು ಸ್ಥಳಗಳಲ್ಲಿ ಧಾರ್ಮಿಕ ವ್ಯತ್ಯಾಸದ ಕಾರಣದಿಂದ ಅನ್ಯ ಧರ್ಮದವರು ಅತಿರೇಕವಾಗಿ ವರ್ತಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಸತ್ಯವಿಶ್ವಾಸಿ ಮಾಡಬೇಕಾದ ಕೆಲಸ ಅನ್ಯ ಧರ್ಮದವರ ಅತಿರೇಕ ವರ್ತನೆಗಳಿಗೆ ಅದೇ ರೀತಿ ಅತಿರೇಕವಾಗಿ ವರ್ತಿಸಿ ಪ್ರತೀಕಾರ ತೀರಿಸುವುದಲ್ಲ. ಒಬ್ಬ ನೈಜ ಸತ್ಯವಿಶ್ವಾಸಿ ಅಲ್ಲಾಹನ ಆಜ್ಞೆಗಳನ್ನು ಶಕ್ತಿಯುಕ್ತವಾಗಿ ಅನುಷ್ಠಾನಕ್ಕೆ ತರಬೇಕು. ಅದರ ಬಗ್ಗೆ ಒಂದಿಷ್ಟು ಸಹ ನಿರ್ಲಕ್ಷ್ಯತೆಯಿಂದ ವರ್ತಿಸಬಾರದು. ನ್ಯಾಯಕ್ಕೆ ಬೆಂಬಲವಾಗಿ ಸಾಕ್ಷಿ ಹೇಳುವುದರ ಅರ್ಥವೇನೆಂದರೆ ಇಸ್ಲಾಮ್ ಧರ್ಮದ ಉಪದೇಶಗಳನ್ನು ನೀವು ಅಚ್ಚುಕಟ್ಟಾಗಿ ಪಾಲಿಸಿಕೊಂಡು, ನಿಮ್ಮ ಕಾರ್ಯರೂಪದ ವರ್ತನೆ ಅನ್ಯ ಧರ್ಮದವರಿಗೆ ಮತ್ತು ಸಮಾಜಕ್ಕೆ ಒಂದು ಉತ್ತಮ ಮಾದರಿಯಾಗಬೇಕು. ಅದು ಅನ್ಯ ಜನಾಂಗದವರಿಗೂ ಮಾದರಿಯಾಗುವಂತಿರಬೇಕು.

ಈಗಿನ ಕಾಲದಲ್ಲಿ ಮುಸ್ಲಿಮರು ಮಾಡುವ ಅನ್ಯಾಯ ಕೃತ್ಯಗಳ ಬಗ್ಗೆ ಪಶ್ಚಿಮದ ದೇಶಗಳಲ್ಲಿ ಬಹಳ ಚರ್ಚೆಯಾಗುತ್ತಿದೆ. ಯಾವ ಜನರು ತಮ್ಮ ಸ್ವಂತ ಧರ್ಮದವರೊಂದಿಗೆ ಅನ್ಯಾಯದಿಂದ ವರ್ತಿಸುತ್ತಾರೋ ಅವರು ಅನ್ಯರೊಂದಿಗೆ ಹೇಗೆ ತಾನೆ ನ್ಯಾಯಬದ್ಧವಾಗಿ ವರ್ತಿಸುವರು ಎಂದು ಪ್ರಶ್ನಿಸಲಾಗುತ್ತಿದೆ. ಇದು ಬಹಳ ದೊಡ್ಡ ದುಃಖಕರ ವಿಷಯವಾಗಿದೆ. ಮುಸ್ಲಿಮರು ತಮ್ಮ ಕೃತ್ಯಗಳ ಮೂಲಕ ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುತ್ತಿದ್ದಾರೆ. ಅಧಿಕಾರದಲ್ಲಿರುವವರು ಜನರ ಹಕ್ಕುಗಳನ್ನು ಅಪರಿಸುತ್ತಿದ್ದಾರೆ. ಜನರು ಸರಕಾರದ ವಿರುದ್ಧ ಹೋರಾಡುತ್ತಿದ್ದಾರೆ. ಜನ ಸಮೂಹಗಳು ದೌರ್ಜನ್ಯಗಳಿಗೆ ಪಾತ್ರರಾಗುತ್ತಿದ್ದಾರೆ. ವಿನಾಶಗಳು ಸಂಭವಿಸುತ್ತಾ ಇವೆ. ಇಸ್ಲಾಮ್ ಪ್ರಿಯರೆಂದು ಹೇಳಿಕೊಳ್ಳುವ ಗುಂಪುಗಳು ತಮ್ಮ ಜನರನ್ನೇ ಹತ್ಯೆ ಮಾಡುತ್ತಿದ್ದಾರೆ. ವಿದೇಶಗಳಲ್ಲಿಯೂ ಅವರು ದೌರ್ಜನ್ಯ ಕೃತ್ಯಗಳನ್ನು ನಡೆಸುತ್ತಿದ್ದಾರೆ. ಅವರು ತಮ್ಮ ಕೃತ್ಯಗಳನ್ನು 'ಆ ಜನರು ನಮ್ಮವರನ್ನು ಕೊಲ್ಲುತ್ತಿದ್ದಾರೆ' ಎಂದು ಹೇಳಿ ಸಮರ್ಥಿಸುತ್ತಾರೆ.

ಒಟ್ಟಿನಲ್ಲಿ ಈ ಜನಾಂಗಗಳ ಹಗೆತನ ಮುಂದೆ ಹಗೆತನದ ಸಂತಾನಗಳನ್ನು ಸೃಷ್ಟಿಸುತ್ತಾ ಮುಂದುವರಿಯುತ್ತವೆ. ಇದರ ಸರಪಳಿ ಎಂದೂ ಕೊನೆಗೊಳ್ಳದು. ಆದುದರಿಂದಲೇ ಅಲ್ಲಾಹನು ಹೇಳಿದ್ದಾನೆ ಯಾವುದೇ ಜನಾಂಗದ ಶತ್ರುತ್ವ ಸಹ ನಿಮ್ಮನ್ನು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವುದರಿಂದ ತಡೆಯದಿರಲಿ, ನೀವು ಎಲ್ಲ ಪರಿಸ್ಥಿತಿಗಳಲ್ಲೂ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸಬೇಕು ಎಂದು. ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸದ ಕಾರಣದಿಂದಲೇ ದೌರ್ಜನ್ಯಗಳು ವರ್ಧಿಸುತ್ತಾ ಇವೆ. ಮುಸ್ಲಿಮರ ಕೃತ್ಯರೂಪದ ಉದಾಹರಣೆಗಳು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿರುವ ಕಾರಣದಿಂದ ಮುಸ್ಲಿಮೇತರರು ನಮ್ಮನ್ನು ಸಹ ವಿರೋಧಿಸುತ್ತಿದ್ದಾರೆ. ಮುಸ್ಲಿಮರು ತಮ್ಮ ಕೃತ್ಯ ರೂಪದ ಉದಾಹರಣೆ ಲೋಕದ ಮುಂದೆ ತೋರಿಸುತ್ತಾ ಇಸ್ಲಾಮಿನ ಸುಂದರ ತತ್ವಗಳನ್ನು ಲೋಕಕ್ಕೆ ತಿಳಿಸುತ್ತಾ ಇಸ್ಲಾಮ್ ಧರ್ಮದ ತಬ್ಲೀಗ್ ಮಾಡಬೇಕಾಗಿತ್ತು. ಆದರೆ ಇಲ್ಲಿ ಲೆಕ್ಕಾಚಾರವೇ ಅಡಿಮೇಲಾಗಿದೆ. ಮುಸ್ಲಿಮ್ ದೇಶಗಳಲ್ಲಿ ದೌರ್ಜನ್ಯ ಕೃತ್ಯಗಳ ಹೊರತು ಬೇರೇನೂ ಕಾಣಿಸುವುದಿಲ್ಲ. ಪವಿತ್ರ ಖುರ್‌ಆನಿನ ಆಜ್ಞೆ ಎಷ್ಟು ಸುಂದರವಾಗಿದೆ. ಯಾವುದೇ ಜನಾಂಗದ ಶತ್ರುತ್ವ ಅವರ ವಿರುದ್ಧ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ ಎಂದು. ಈ ಆಜ್ಞೆಯನ್ನು ಬೇರೆ ಯಾವುದೇ ಧಾರ್ಮಿಕ ಗ್ರಂಥದಲ್ಲಿ ನೀಡಲಾಗಿಲ್ಲ.

ಶತ್ರುಗಳೊಂದಿಗೆ ಸಹ ನ್ಯಾಯದ ಆವಶ್ಯಕತೆಗಳನ್ನು ಈಡೇರಿಸುತ್ತಾ ವರ್ತಿಸಬೇಕು. ಅದರ ಬಗ್ಗೆ ಬಹಳ ಹೆಚ್ಚು ಲಕ್ಷ್ಯ ನೀಡಬೇಕು ಎಂಬುದು ಎಷ್ಟು ಸುಂದರವಾದ ಉಪದೇಶವಾಗಿದೆ. ಆದರೆ ದುಃಖಕರವಾದುದೇನೆಂದರೆ ಇಂತಹ ಉಪದೇಶ ದೊರೆತಿದ್ದರೂ ಮುಸ್ಲಿಮರು ಎಂತಹ ಕೃತ್ಯಗಳನ್ನು ಮಾಡುತ್ತಿದ್ದಾರೆಂದರೆ ಮುಸ್ಲಿಮೇತರ ಲೋಕದಲ್ಲಿ ಇಸ್ಲಾಮ್ ಧರ್ಮವನ್ನು ಅಪಕೀರ್ತಿಗೆ ಗುರಿಪಡಿಸುತ್ತಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಷ್ಟು ಸೂಕ್ಷ್ಮವಾಗಿ ಈ ಉಪದೇಶವನ್ನು ತನ್ನ ಶಿಷ್ಯರು ಪಾಲಿಸುವಂತೆ ಮಾಡಿದರು ಎಂಬುದರ ಬಗ್ಗೆ ಕೆಲವು ಉದಾಹರಣೆಗಳನ್ನು ನೀಡುತ್ತೇನೆ.

ಒಂದು ಯುದ್ಧದ ಸಂದರ್ಭದಲ್ಲಿ ಒಬ್ಬ ಮಹಿಳೆ ಸಹಾಬರಿಂದ ತಪ್ಪಾಗಿ ವಧಿಸಲ್ಪಟ್ಟಳು. ಅದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಾಗ ಅವರು ಸಹಾಬರ ವಿರುದ್ಧ ಬಹಳ ಸಿಟ್ಟುಗೊಂಡರು. ಹದೀಸಿನಲ್ಲಿ ವರದಿಯಾಗಿದೆ, ಅವರ ಮುಖದಲ್ಲಿ ಸಿಟ್ಟಿನ ಚಿಹ್ನೆಗಳು ಹಿಂದೆಂದಿಗಿಂತಲೂ ಹೆಚ್ಚಾಗಿ ಕಾಣಿಸಿಕೊಂಡವು. ಸಹಾಬರು ಸ್ವತಃ ಹೇಳಿದರು: ಆ ಮಹಿಳೆಯನ್ನು ಪ್ರಮಾದವಶಾತ್ ಕೊಲ್ಲಲಾಯಿತು ಎಂದು. ಆದರೆ ಆ ಮಹಿಳೆಗೆ ಸಂಬಂಧಿಸಿ ನ್ಯಾಯಪಾಲನೆ ಮಾಡಲಾಗಿಲ್ಲ ಎಂಬುದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಬಹಳ ದುಃಖವಾಗಿತ್ತು.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಬ್ಬ ಯಹೂದಿಗೆ ಒಬ್ಬ ಸಹಾಬಿ ನಾಲ್ಕು ದಿರ್‌ಹಮ್ ಸಾಲ ಪಾವತಿಸಲಿಕ್ಕಿತ್ತು. ಸಾಲದ ಕಾಲಾವಧಿ ಮುಗಿದ ಕಾರಣ ಯಹೂದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೂರು ನೀಡಿದನು. ನನಗೆ ಕೊಡಬೇಕಾದ ಹಣ ಸಹಾಬಿ ಕೊಡುತ್ತಾ ಇಲ್ಲ ಎಂದು. ಆಗ ಅಬ್ದುಲ್ಲಾ ಎಂಬ ಹೆಸರಿನ ಆ ಸಹಾಬಿಯನ್ನು ಕರೆದು ಯಹೂದಿಗೆ ಸಾಲದ ಹಣ ಮರುಪಾವತಿಸುವಂತೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ಆಗ ಹಝ್ರತ್ ಅಬ್ದುಲ್ಲಾ ಹೇಳಿದರು:

‘ಅಲ್ಲಾಹನಾಣೆ ನನಗೆ ಸಾಲ ಮರುಪಾವತಿ ಮಾಡುವ ಶಕ್ತಿ ಈಗ ಇಲ್ಲ.’ ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪುನಃ ಹೇಳಿದರು: ‘ಯಹೂದಿಯ ಸಾಲ ಮರುಪಾವತಿ ಮಾಡಿರಿ’ ಎಂದು. ಆಗ ಆ ಸಹಾಬಿ ಹೇಳಿದರು: ನಾನು ಆತನೊಂದಿಗೆ ಹೇಳಿದ್ದೇನೆ, ನೀವು ನಮ್ಮನ್ನು ಖೈಬರ್ ಯುದ್ಧಕ್ಕೆ ಕಳುಹಿಸುವಿರಿ. ಅಲ್ಲಿ ಯುದ್ಧದ ನಂತರ ಸಿಗಬಹುದಾದ ಸಂಪತ್ತಿನಿಂದ ನನಗೆ ಸಹ ಒಂದು ಭಾಗ ಸಿಗುವುದು. ಅದರಿಂದ ನಾನು ಸಾಲ ಮರುಪಾವತಿ ಮಾಡುವೆನು ಎಂದು ಹೇಳಿರುವೆನು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೂರನೆಯ ಸಾರಿ ಹೇಳಿದರು: ಯಹೂದಿಯ ಸಾಲ ಮರುಪಾವತಿ ಮಾಡಿರಿ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೂರು ಸಾರಿ ಒಂದು ಮಾತನ್ನು ಹೇಳಿದರೆ ಅದು ಕೊನೆಯ ತೀರ್ಪು ಎಂದು ಗಣಿಸಲಾಗುತ್ತಿತ್ತು. ಆಗ ಹಝ್ರತ್ ಅಬ್ದುಲ್ಲಾ ಪೇಟೆಗೆ ಹೋದರು. ಅವರು ಒಂದು ಚಾದರವನ್ನು ಲುಂಗಿಯಾಗಿ ಧರಿಸಿದ್ದರು. ತಲೆಯಲ್ಲಿ ಮುಂಡಾಸು ಸಹ ಇತ್ತು. ಅವರು ಮುಂಡಾಸನ್ನು ಬಿಚ್ಚಿ ಉಟ್ಟುಕೊಂಡರು. ಉಟ್ಟುಕೊಂಡಿದ್ದ ಚಾದರವನ್ನು ನಾಲ್ಕು ದಿರ್‌ಹಮ್‌ಗೆ ಮಾರಾಟ ಮಾಡಿ ಸಾಲವನ್ನು ಪಾವತಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನ್ಯಾಯಪಾಲನೆ ಆ ರೀತಿ ಇತ್ತು. ಸಹಾಬಿ ಕಾಲಾವಕಾಶ ಅಪೇಕ್ಷಿಸಿರುವುದರಿಂದ ಕಾಲಾವಕಾಶ ನೀಡಬೇಕೆಂದು ಯಹೂದಿಯೊಂದಿಗೆ ಅವರು ಹೇಳಲಿಲ್ಲ. ಯಹೂದಿಗೆ ಕೂಡಲೆ ಸಾಲ ಮರುಪಾವತಿ ಮಾಡಲು ಹೇಳಿದರು. ಆ ಕಾರಣದಿಂದ ಉಟ್ಟ ಬಟ್ಟೆಯನ್ನು ಸಹ ಆ ಸಹಾಬಿ ಮಾರಾಟ ಮಾಡಬೇಕಾಯಿತು. ನ್ಯಾಯಪಾಲನೆಯ ಮಟ್ಟ ಈ ರೀತಿ ಇರಬೇಕು. ನಾವು ಎಲ್ಲಾ ಸ್ಥಳಗಳಲ್ಲಿಯೂ ಈ ಮಟ್ಟವನ್ನು ಸ್ಥಾಪಿಸುವವರಾದರೆ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಸೇವಕನಾಗಿ ಆಗಮಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರಾಗಿ ಗಣಿಸಲ್ಪಡುವೆವು. ಅವರ ಆಗಮನದ ಉದ್ದೇಶ ಇದೇ ಆಗಿದೆ. ಅದನ್ನು ನಾವು ಈಡೇರಿಸುವವರಾಗುವೆವು.

ನಾನು ಪಠಿಸಿದ ಸೂರತುಲ್ ಅಲ್‌ರಾಫಿನ ವಚನದ ಭಾಷಾಂತರ ಹೀಗಿದೆ: **ನಾವು ಸೃಷ್ಟಿಸಿದವರ ಪೈಕಿಯಲ್ಲಿ ಸತ್ಯದ ಮೂಲಕ ಮಾರ್ಗದರ್ಶನ ಮಾಡುವ ಅದರಿಂದಲೇ ನ್ಯಾಯವನ್ನು ಪಾಲಿಸುವ ಜನರ ಗುಂಪು ಸಹ ಇದೆ. (7:182).** ಮನುಷ್ಯನು ಸ್ವತಃ ಮಾರ್ಗದರ್ಶನವನ್ನು ಅನುಸರಿಸುವುದಿಲ್ಲವಾದರೆ ಅವನು ಅನ್ಯರಿಗೆ ಹೇಗೆ ತಾನೆ ಮಾರ್ಗದರ್ಶನ ನೀಡಬಲ್ಲನು? ಒಬ್ಬನು ಸ್ವತಃ ನ್ಯಾಯ ಪಾಲನೆಯನ್ನು ಮಾಡುವುದಿಲ್ಲವಾದರೆ ಅನ್ಯರಿಗೆ ಹೇಗೆ ತಾನೆ ನ್ಯಾಯ ನೀಡಬಲ್ಲನು. ಆದುದರಿಂದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿಕೊಂಡ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸಬೇಕಾಗಿದೆ. ಅವರ ಆಗಮನದ ಉದ್ದೇಶವನ್ನು ನೆರವೇರಿಸಬೇಕಾಗಿದೆ. ಇಸ್ಲಾಮಿನ ಸಂದೇಶವನ್ನು ಲೋಕಕ್ಕೆ ತಲಪಿಸಬೇಕಾಗಿದೆ. ತಬ್ಲೀಗ್ ಬಗ್ಗೆ ನಮ್ಮ ಹೊಣೆಗಾರಿಕೆಯನ್ನು ಈಡೇರಿಸಬೇಕಾಗಿದೆ. ಅದಕ್ಕಾಗಿ ನಾವು ಇಸ್ಲಾಮ್ ಧರ್ಮದ ತತ್ವಗಳ ಪ್ರಕಾರ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಪ್ರಕಾರ ಎಲ್ಲಾ ಶ್ರೇಷ್ಠ ಸದ್ಗುಣಗಳನ್ನು ನಮ್ಮಲ್ಲಿ ಅಳವಡಿಸಬೇಕು.

ನಾವು ನಮ್ಮ ಜೀವಿತದಲ್ಲಿ ಅಲ್ಲಾಹನ ಆಜ್ಞೆಗಳನ್ನು ಕಾರ್ಯರೂಪದಲ್ಲಿ ಅಳವಡಿಸಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿಕೊಂಡ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ಅನ್ಯರಿಗೆ ಮಾರ್ಗದರ್ಶನ ಮತ್ತು ನ್ಯಾಯಪಾಲನೆಯ ಮಾದರಿ ತೋರಿಸುವವರನ್ನಾಗಿ ಅಲ್ಲಾಹನು ಮಾಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಮುಕರ್‍ರಮ್ ಹಸನ್ ಮುಹಮ್ಮದ್ ಖಾನ್ ಆರಿಫ್ ಸಾಹಿಬ್ – ಮುಕರ್‍ರಮ್ ಫಝ್ಲ್ ಮುಹಮ್ಮದ್ ಖಾನ್ ಸಾಹಿಬ್ ಶಿಮ್ಲವಿ ಅವರ ಪುತ್ರ– ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಹೇಳಿ ಅವರ ಸದ್ಗುಣಗಳನ್ನು ವಿವರಿಸಿದರು.)

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 10-11-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha’at Team for Nazarath Nashr-O-Isha’ath, Qadian

***Email*: *khutuba.kannada@gmail.com***

**You can find all the Sermons archived at**: www.alislam.org/friday-sermon